**ಓ.ಎಸ್ ನಂ. 17/2023** **ಡಿ.ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ 16.07.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಪಿ ಎನ್ ಜಿ ವಕೀಲರಿಂದಃ**

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಮಾಹಿತಿಗಳು ನನಗೆ ತಿಳಿದಿರುತ್ತವೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ದಾವಾಸ್ತಿಯನ್ನು ಖರೀದಿಸುವ ಸಮಯದಲ್ಲಿ ನನಗೆ ಮಾರಾಟ ಮಾಡಿದಂತಹ ಪ್ರತಿವಾದಿ 6 ಮತ್ತು 7 ರವರ ತಂದೆಯ ಬಳಿ ವಂಶವೃಕ್ಷ ವನ್ನು ಕೇಳಿ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಮುಂದುವರಿದು ಆ ಸಮಯದಲ್ಲಿ ಅವರು ಇಬ್ಬರೇ ಮಕ್ಕಳು ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆ ದಾಖಲಾತಿಯನ್ನು ನನ್ನ ವಕೀಲರ ಬಳಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ತಿಯನ್ನು ನಾನು ಖರೀದಿಸುವ ಸಮಯದಲ್ಲಿ ಸದರಿ ಕುಮಾರ್ ರವರಿಗೆ ದಾವಾಸ್ತಿ ಹೇಗೆ ಬಂದಿರುತ್ತದೆ ಎಂದು ತಿಳಿದುಕೊಂಡಿರುತ್ತೇನೆ. ದಾವಾಸ್ತಿಯು ಮೂಲತಃ ಕುಮಾರ್ ರವರ ತಂದೆಯ ಆಸ್ತಿಯಾಗಿರುತ್ತದೆ. ದಾವಾಸ್ತಿಯನ್ನು ಖರೀದಿಸುವ ಸಮಯದಲ್ಲಿ ದಾವಾಸ್ತಿಯು ಕುಮಾರ್ ರವರ ತಂದೆಯವರಿಗೆ ಸೇರಿತ್ತು ಎಂಬ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿ.

ದಾವಾಸ್ತಿಯನ್ನು ಖರೀದಿಸುವ ಸಮಯದಲ್ಲಿ ಸದರಿ ಆಸ್ತಿಯು ಕುಮಾರ್ ರವರ ತಂದೆ ಸಣ್ಣಪ್ಪ ರವರಿಗೆ ಸೇರಿತ್ತು ಎಂದು ತಿಳಿದಿತ್ತು ಮತ್ತು ಸದರಿ ಸಣ್ಣಪ್ಪ ನವರಿಗೆ ಎಷ್ಟು ಜನ ಮಕ್ಕಳು ಎಂದು ಸಂಬಂಧಪಟ್ಟ ಕಛೇರಿಯಿಂದ ದಾಖಲಾತಿಯನ್ನು ಕೇಳಿ ಪಡೆದುಕೊಂಡಿರುತ್ತೇನೆ. ನಾನು ಸಣ್ಣಪ್ಪ ನವರಿಗೆ ಎಷ್ಟು ಜನ ಮಕ್ಕಳು ಎಂದು ತಾಹಶೀಲ್ದಾರ್ ರವರಿಂದ ಪಡೆದುಕೊಂಡಿದ್ದ ದಾಖಲಾತಿಯನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಸದರಿ ಸಣ್ಣಪ್ಪ ನವರಿಗೆ 4 ಜನ ಮಕ್ಕಳು ಇದ್ದರು ಎಂದು ನನಗೆ ತಿಳಿದಿರಲಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ